ಉ) ಈಗ 'ಪ್ರೋಗ್ರಾಂ ಆಫ್ ವರ್ಕ್ಸ್' (ವಿಶೇಷ ದಸ್ತೆರೆ) ಕೆಲಸ ಮಾಡಲು ಹಣ ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).— ಎ) ರಾಷ್ಟ್ರೀಯ ಹೆದ್ದಾರಿಗಳ ಕೆಲಸಗಳು ರಾಜ್ಯದ ಆಯವ್ಯಯದಲ್ಲಿ ಬರುವುದಿಲ್ಲ. ಇವನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡುತ್ತಾರೆ. ಬಡ್ತಿಟ್ಟಿನಲ್ಲಿ ಸೇರಿರುವ ಹೊಸ ರಸ್ತೆ ಮತ್ತು ಸೇತುವೆ ಕೆಲಸಗಳಲ್ಲಿ ೧,೭೫೬ ಕೆಲಸಗಳನ್ನು ಮಂಜೂರು ಮಾಡಲಾಗಿದೆ.

ಆ) ಮಂಜೂರಾಗಿರುವ ಹೊಸ ಕೆಲಸಗಳಿಗೆ ಟೆಂಡರುಗಳನ್ನು ಕರೆದಿವೆ. ಮತ್ತು ಕೆಲವು ಕೆಲಸಗಳಿಗೆ ಟೆಂಡರುಗಳನ್ನು ಕರೆಯುವ ಹಂತದಲ್ಲಿವೆ. ಕೆಲವು ಕೆಲಸಗಳನ್ನು ಇಲಾಖಾವತಿಯಿಂದಲೂ ತೆಗೆದುಕೊಳ್ಳಲಾಗಿದೆ.

ಇ) ಮತ್ತು ಈ) ರಸ್ತೆ ಮತ್ತು ಸೇತುವೆ ಕೆಲಸಗಳಿಗೆ ಯೋಜನಾ ಬಾಬತ್ತಿನಲ್ಲಿ ೧೯೮೬-೮೭ರ ಸಾಲಿನಲ್ಲಿ ಡಿಸೆಂಬರ್ ೮೭ರ ಕೊನೆಯ ವರೆಗೆ (ನಡೆಯುತ್ತಿರುವ ಕೆಲಸಗಳೂ ಸೇರಿದಂತೆ) ೧,೪೮೨ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಲಾಗಿದೆ. ಹಿಗ್ಗೇ ಡಿಸೆಂಬರ್ ೧೯೮೭ರ ಕೊನೆಗೆ ಯೋಜನಾ ಬಾಬತ್ತಿನಲ್ಲಿ ರಸ್ತೆ ಮತ್ತು ಸೇತುವೆ ಕೆಲಸಗಳಿಗೆ ಪಾವತಿ ಮಾಡಬೇಕಾದ ಬಾಕಿ ಜಿಲ್ಲಾಗಳ ಮೊತ್ತ ಸುಮಾರು ೩೮೦ ಲಕ್ಷ ರೂಪಾಯಿಗಳು.

ಉ ಮತ್ತು ಊ) ಬಾಕಿ ಉಳಿದಿರುವ ಜಿಲ್ಲಾಗಳ ಪಾವತಿ ಮಾಡಲು ಮತ್ತು ವಿಶೇಷ ಕೆಲಸಗಳಿಗೆ ಹಣ ಒದಗಿಸಲು ರಾಜ್ಯದ ಸಾಧನ-ಸಂಪತ್ತಿನ (ರೀಸ್ ಆಂಡ್ ಮೀನ್ಸ್) ಅನುಸಾರಣವಾಗಿ ಹಣ ಬಿಡುಗಡೆ ಮಾಡಲಾಗುವುದು.

ಉಳ್ಳಾಲ ಕ್ಷೇತ್ರದಲ್ಲಿ ರಸ್ತೆ ದುರಸ್ತಿ ಕಾಮಗಾರಿ

೧೩೬ (೧೮೯) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ ಕ್ಷೇತ್ರ).—ಮಾನ್ಯ ಲೋಕೋಪಯೋಗಿ, ಜಲಾನಯನ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಉಳ್ಳಾಲ ಕ್ಷೇತ್ರದ ಮಂಜನ್ನೂರು ಮಂಜಲು ತೋಟ ವಲಿಯೂರ್ ರಸ್ತೆ ಮತ್ತು ಪಾವೂರಾ ಇನೊಳಿ ರಸ್ತೆ ಡಾಂಬರು ಹಾಕದೆ ಹತ್ತಾರು ವರ್ಷಗಳಿಂದ ನಾಡುರಸ್ತೆಯಲ್ಲಿರುವುದು ನಿಜವಲ್ಲವೇ ?

ಆ) ೫೬ ಬಸ್ಸುಗಳಲ್ಲಿ ಓಡಾಡುವ ಸಾವಿರಾರು ಜನರಿಗೆ ಉಪಕಾರವಾಗುವ ಈ ಗ್ರಾಮಾಂತರ ರಸ್ತೆಗಳನ್ನು ಈ ವರ್ಷ ದುರಸ್ತಿ ಪಡಿಸಿ ಡಾಂಬರು ಹಾಕಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).— ಅ) ಇವು ಹಳ್ಳಿ ಶ್ರೇಣಿಯ ರಸ್ತೆಗಳು, ಪೊದಲಪೆಯ ರಸ್ತೆ ೯ ಕಿ.ಮೀ. ಉದ್ದವಿದ್ದು, ಇದರಲ್ಲಿ ೧.೫ ಕಿ.ಮೀ.ಗೆ ಜಲ್ಲಿ ಹಾಕಲಾಗಿದೆ. ಉಳಿದ ಭಾಗ ಮಣ್ಣಿನ ರಸ್ತೆ. ಏರಡನೆಯ ರಸ್ತೆ ೫.೮ ಕಿ.ಮೀ. ಇದ್ದು, ಜಲ್ಲಿ ರಸ್ತೆಯಾಗಿದೆ. ದೊರಕಿತ್ತಿರುವ ಅನುದಾನಕ್ಕನುಗುಣವಾಗಿ ದುರಸ್ತಿ ಕೆಲಸಗಳನ್ನು ಕೈಗೊಂಡು, ರಸ್ತೆಗಳನ್ನು ಅಭಿವೃದ್ಧಿ ಮಾಡಲು ಪ್ರಯತ್ನಿಸಲಾಗುತ್ತಿದೆ.

ಆ) ಈ ಏರಡು ರಸ್ತೆಗಳನ್ನು ಅಭಿವೃದ್ಧಿಪಡಿಸಿ, ಡಾಂಬರು ಹಾಕಲು ಸುಮಾರು ೨೨ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ಕೆಲಸಗಳನ್ನು ಹಣಕಾಸಿನ ಲಭ್ಯತೆಗನುಗುಣವಾಗಿ ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಶಾಲಾವಾಹನಗಳಿಗೆ ಸಮವಸ್ತ್ರಗಳ ವಿತರಣೆಗಾಗಿ ತಗಲಿದ ವೆಚ್ಚ

೧೩೭ (೧೮) ಶ್ರೀ ಗೋಪಾಲ ಮಾಂಕುಂಪ ಕಾನಡೆ (ಪಿರಿಯಾಪಟ್ಟಣ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಶಾಲಾ ವಾಹನಗಳಿಗೆ ಉಚಿತವಾಗಿ ಪಡೆಯಲಾದ ಸಮವಸ್ತ್ರಗಳ ಪ್ರಮಾಣವೆಷ್ಟು, ಹಾಗೂ ಅದಕ್ಕೆ ವರ್ಷವೊಂದಕ್ಕೆ ತಗಲುವ ವೆಚ್ಚವೆಷ್ಟು ?